ಶ್ರೀ ಬಿ. ಭಾಸ್ಕರ ಶೆಟ್ಟಿ:—ಐದೂವರೆ ಗಂಟೆಗೆ ರಿಪ್ಲೈ ಪ್ರಾರಂಭವಾಗುತ್ತದೆ ಎಂದು ಹೇಳಿ ಈಗ ಪ್ರಾರಂಭವಾಗಿದೆ. ಒಂದು ಕಡೆ ಜಗಳವಾಡಿ ಕೆಲವು ಸದಸ್ಯರು ಹೊರಟು ಹೋದರು. ಎಂಟು ಗಂಟೆವರೆಗೆ ಕುಳಿತುಕೊಂಡು ಹೊತ್ತೆ ನಾಳೆ ಬೇಗ ಬರುವುದು ಕಷ್ಟವಾಗುತ್ತೆ. ಮತ್ತು ನಾವು ಏನು ಕೆಲಸ ಮಾಡಿಕೊಳ್ಳುವುದಕ್ಕೂ ಆಗುವುದಿಲ್ಲ. ಆದುದರಿಂದ ಇದನ್ನು ಪ್ರತಿಭಟಿಸಿ ನಾವು ಹೊರಗೆ ಹೋಗುತ್ತೇವೆ.

(ಶ್ರೀ ಭಾಸ್ಕರ ಶೆಟ್ಟಿ ಮತ್ತು ಇತರ ಕೆಲವು ಸದಸ್ಯರು ಸಭಾತ್ಯಾಗ ಮಾಡಿದರು).

ಶ್ರೀ ಬಿ. ರಾಚಯ್ಯ:—ಈ ಕೃಷಿ ಬೇಡಿಕೆಗಳ ಮೇಲೆ ಮಾತನಾಡಿದಂಥ ಬಹುಮಂದಿ ಸದಸ್ಯರು ಇದುವರೆಗೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಡಿದ್ದೇವೆ ಅವು ರೈತರಿಗೆ ಹೆಚ್ಚಿನ ಸ್ಫೂರ್ತಿಯನ್ನೂ ಉತ್ಸಾಹವನ್ನೂ ತುಂಬತಕ್ಕಂಥದಾಗಿಲ್ಲ ಮತ್ತೆ ಒಂದು ಹಳೆಯ ಪದ್ಧತಿ ಪ್ರಕಾರ ಒಂದು ಕೃಷಿ ಪಾಲಸಿ ನಡೆದುಕೊಂಡು ಬಂದಿದೆ ಅಂತಲೂ, ಈಗ ಏನೇನು ಪೊಸ ಯೋಜನೆಗಳನ್ನು ಹಾಕಿಕೊಂಡಿದ್ದೇವೆಯೋ ಆ ಯೋಜನೆಗಳು ಹೆಚ್ಚಿಗೆ ಎಲ್ಲ ನೀರಾವರಿ ಪ್ರದೇಶಗಳಲ್ಲಿವೆ, ಆ ಪ್ರದೇಶಕ್ಕೆ ಹೆಚ್ಚು ಅನುಕೂಲವಾಗಿದ್ದು ಅದರಲ್ಲಿಯೂ ಕೂಡ ದೊಡ್ಡ ರೈತರಿಗೆ ಹೆಚ್ಚು ಉಪಯೋಗವಾಗಿದೆ, ಸಣ್ಣ ಹಿಡುವಳಿದಾರರಿಗೆ ಬಹಳ ಉಪಯೋಗವಾಗಿಲ್ಲ ಎಂತಲೂ ಮತ್ತು ಮಳೆ ಆಶ್ರಯವನ್ನು ನಂಬಿಕೊಂಡು ಬೇಸಾಯ ಮಾಡತಕ್ಕಂಥ ೧೦೦ ಕ್ಕೆ ೯೦ ಭಾಗದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕೃಷಿ ಬದಲಾವಣೆಯಲ್ಲಿ ರೈತನಿಗೆ ಬೇಕಾಗಿರತಕ್ಕ ಸಾಧನ ಸಂಪತ್ತುಗಳು ಸಕಾಲದಲ್ಲಿ ಸರಿಯಾದ ಬೆಲೆಗೆ ದೊರೆಯುತ್ತಾ ಇಲ್ಲ, ಅವನಿಗೆ ಬೇಕಾಗಿರತಕ್ಕಂಥ ಹಣವಾಗಲಿ, ಉಪಕರಣವಾಗಲಿ, ಬೀಜಗಳಾಗಲಿ, ಗೊಬ್ಬರವಾಗಲಿ, ಕ್ರಿಮಿನಾಶಕ ವಸ್ತು ಅವುಗಳ ಬೆಲೆ ಹೆಚ್ಚು ಆಗದೆ ಅವುಗಳನ್ನು ಕಡಿಮೆ ಬೆಲೆಗೆ ಕೊಡತಕ್ಕ ವ್ಯವಸ್ಥೆ ಆಗಬೇಕು ಮತ್ತು ಬೆಳೆದಂಥ ಪದಾರ್ಥಕ್ಕೆ ಸಾಕಷ್ಟು ಪ್ರಮಾಣದಲ್ಲಿ ಅವರಿಗೆ ಒಂದು ಸ್ಫೂರ್ತಿ ಬರತಕ್ಕ ಬೆಲೆಯನ್ನು ಕೊಡಿಸುವುದರಲ್ಲಿ ಸರಕಾರ ವಿಫಲವಾಗಿದೆ ಎಂಥಲೂ ಹೇಳಿದ್ದಾರೆ. ಹೀಗೆ ನಾಲ್ಕಾರು ಭಾಗಗಳಾಗಿ ಈ ಟೀಕೆಗಳನ್ನು ನಾನು ವಿಂಗಡಿಸಿಕೊಂಡು ಮತ್ತೆ ಮಾನ್ಯ ಸದಸ್ಯರು ಕಳುಹಿಸಿರತಕ್ಕಂಥ ಜ್ಞೋತಾ ನಿರ್ಣಯಗಳನ್ನು ಗಮನಕ್ಕೆ ತೆಗೆದುಕೊಂಡು ನನ್ನ ಕೈಲಾದ ಮಟ್ಟಿಗೆ ಉತ್ತರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ನಾನು ಕಳೆದ ಎರಡು ದಿವಸಗಳಿಂದ ಬಹಳ ಶಾಂತಿಯಿಂದ ಕುಳಿತು ಎಲ್ಲರೂ ಹೇಳಿದ್ದನ್ನು ಕೇಳಿದೆ. ಅಷ್ಟೇ ಉದಾರತೆಯಿಂದ ಮಾನ್ಯ ವಿರೋಧ ಪಕ್ಷದ ಸದಸ್ಯರು ಸರಕಾರದ ಉತ್ತರವನ್ನು ಕೇಳಿದ್ದರೆ ಚೆನ್ನಾಗಿತ್ತು ಎಂದು ನಾನಾದರೂ ಆಶೆಪಡುತ್ತೇನೆ. ಒಟ್ಟಿನಲ್ಲಿ ಈ ಕೃಷಿ ಬಹಳ ಕಾಲದಿಂದಲೂ ಕೂಡ ಅವಿದ್ಯಾವಂತರ ಕೈಯಲ್ಲಿ ಇದ್ದು ಅವರಲ್ಲಿ ಯಾವ ಒಂದು ಪ್ರಗತಿಯನ್ನು ಕೂಡ ಸಾಧಿಸುವುದಕ್ಕೆ ಆಗಿರಲಿಲ್ಲ. ಸರಕಾರದ ಮಟ್ಟದಲ್ಲಿ ಕೃಷಿಗೆ ಹೆಚ್ಚಿನ ಪ್ರಮಾಣದಲ್ಲಿ ಪ್ರೋತ್ಸಾಹ ಸಿಕ್ಕಿಲ್ಲ. ಆದ್ದರಿಂದ ಇದರಲ್ಲಿ ಹೆಚ್ಚಿನ ರೀತಿಯಲ್ಲಿ ನಾವು ಪ್ರಗತಿಯನ್ನು ಮಾಡಬೇಕು ಎಂದು ಹೇಳಿ ಬಹಳ ಮಟ್ಟಿಗೆ ಒತ್ತಾಯ ಮಾಡಿದ್ದಾರೆ. ನಾನಾದರೂ ಕೂಡ ಈ ಸಂಸ್ಥಾನದಲ್ಲಿ ಈ ಭೂಮಿಯನ್ನು ಸಮಪಾತಾಳ ಮಾಡುವುದರಲ್ಲಿ ಅಥವಾ ಭೂಸಂರಕ್ಷಣೆ ಮಾಡುವುದರಲ್ಲಾಗಲಿ ಕಳೆದ ವರ್ಷಕ್ಕಿಂತ ಇಂದಿನ ವರ್ಷದಲ್ಲಿ ಹೆಚ್ಚಿನ ಕಾರ್ಯವನ್ನು ಸಾಧಿಸಿದ್ದೇವೆಂದು ಹೇಳುವುದಕ್ಕೆ ಹೆಮ್ಮೆಪಡುತ್ತೇನೆ. ಎಪ್ಪತ್ತೈದು ಲಕ್ಷ ಹತ್ತು ಸಾವಿರ ಎಕರೆಗಳಲ್ಲಿ ಈ ಭೂ ಸುಧಾರಣೆ ಕಾರ್ಯ ಮಾಡಬೇಕಾಗಿ ಇದ್ದರೂ ಈವೊತ್ತು ೨ ಲಕ್ಷ ೩೫ ಸಾವಿರ ಎಕರೆಗಳಲ್ಲಿ ಈ ಒಂದು ಭೂಸಂರಕ್ಷಣೆ ಕಾರ್ಯವನ್ನು ಮಾಡಲಾಗಿದೆ. ಇನ್ನೂ ಒಂದು ಕೋಟಿ ೨೦ ಲಕ್ಷ ಎಕರೆಗಳಲ್ಲಿ ಭೂಸಂರಕ್ಷಣೆ ಕಾರ್ಯಗಳು ನಡೆಯಬೇಕಾಗಿವೆ. ಕಳೆದ ವರ್ಷ ೬೦ ಲಕ್ಷ ರೂಪಾಯಿ ಹಣ ಕೊಟ್ಟಿದ್ದೆವು. ಕ್ಷಾಮ ಪರಿಹಾರದ ನಿಧಿಯಿಂದ ಕೂಡ ಹಣವನ್ನು ಉಪಯೋಗಿಸಿಕೊಂಡು ಹೆಚ್ಚು ಸಾಧನೆಯನ್ನು ಮಾಡುವುದಕ್ಕೆ ಸಾಧ್ಯವಾಯಿತು. ಈ ವರ್ಷ ಕೃಷಿ ಇಲಾಖೆ ಮುಖಾಂತರ ಒಂದು ಕೋಟಿ ೨೫ ಲಕ್ಷ ರೂಪಾಯಿಗಳಷ್ಟು ಹಣವನ್ನು ಇದಕ್ಕೆ ಒದಗಿಸಿಕೊಟ್ಟಿದ್ದೇವೆ. ಇದು ಬಹುಶಃ ಎರಡು ಲಕ್ಷ ಹತ್ತು ಸಾವಿರ ಎಕರೆಗಳಿಗೆ ಸಾಕಾಗಬಹುದು. ಅದು ಏನೇನು ಸಾಲುವುದಿಲ್ಲ ಎನ್ನುವುದನ್ನು ನಾನು ಒಪ್ಪುತ್ತೇನೆ. ಅನೇಕ ಸದಸ್ಯರು ಮಾತನಾಡುವಾಗ ಈ ಕೃಷಿ ಇಲಾಖೆಗೆ ಕಳೆದ ವರ್ಷ ಏನು ಹಣವನ್ನು ಒದಗಿಸಿಕೊಟ್ಟಿದ್ದಾರೋ ಅದಕ್ಕಿಂತ ಒಂದು ಕೋಟಿ ರೂಪಾಯಿ ಹಣ ಕಡಿಮೆ ಆಗಿದೆ. ಕೃಷಿಗೆ ಪ್ರಾಧಾನ್ಯತೆ ಕೊಡುತ್ತೇವೆ. ಕೃಷಿ ಅಭಿವೃದ್ಧಿ ಹೆಚ್ಚು ಆಗಬೇಕು. ಕೃಷಿಕರ ಅಭಿವೃದ್ಧಿ ಆಗದ ಹೊರತು ದೇಶದ ಸಂಪತ್ತು ಹೆಚ್ಚಿಸುವುದಕ್ಕಾಗುವುದಿಲ್ಲ ಎಂದು ನಾನು ಹಿಂದೆಯೂ ಹೇಳಿದ್ದೇನೆ. ಆ ಮಾತನ್ನು ನಾನು ಈಗಲೂ ಒಪ್ಪುತ್ತೇನೆ. ಆದರೆ ನಮ್ಮ ರಾಜ್ಯದಲ್ಲಿ ನೀರಾವರಿ ಸೌಕರ್ಯಗಳನ್ನು ಹೆಚ್ಚಿಸುವುದಕ್ಕೋಸ್ಕರ ಈ ಉಭಯ ಸಭೆಗಳ ರಿಸೋರ್ಸ್ ಕಮಿಟಿ ಎಂದು ಏನು ಮಾಡಿದ್ದಾರೆ ಅವರು ಈ ಯೋಜನೆಗಳನ್ನು ಕಡಿಮೆ ಮಾಡಿ ನೀರಾವರಿಗೆ ಹೆಚ್ಚಿಗೆ ಹಣ ಕೊಡಬೇಕು ಎಂಬ ಉದ್ದೇಶದಿಂದ ಒಂದು ಕೋಟಿ ರೂಪಾಯಿಗಳವರೆಗೆ ಈ ಇಲಾಖೆಯಲ್ಲಿ ಬಡ್ಜೆಟ್ ಹಣದಲ್ಲಿ ಕಡಿಮೆ ಆಯಿತು. ಆದರೆ ಇದು ಕಡಿಮೆ ಆಗಬಾರದಾಗಿತ್ತು ಎಂದು ಅನೇಕರ ಅಭಿಪ್ರಾಯವಾಗಿದೆ. ಒಟ್ಟಿನಲ್ಲಿ ಮಳೆ ಆಶ್ರಯವನ್ನು ಅವಲಂಬಿಸಿರತಕ್ಕ ಈ ಪ್ರಾಂತ್ಯದಲ್ಲಿ ಹೆಚ್ಚಿಗೆ ನೀರಾವರಿಯನ್ನು ಉತ್ತಮಪಡಿಸಿಕೊಳ್ಳದಿದ್ದರೆ ಇನ್ನು ಹಲವಾರು ಕಾರ್ಯಕ್ರಮಗಳನ್ನು ತೆಗೆದು